ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 12 ನೇ ಮಾರ್ಚ್, 2020

ಪೊಲೀಸ್ ಇಲಾಖೆಯ ದ್ವಿತೀಯ ದರ್ಜೆ ಸಹಾಯಕರುಗಳಿಗೆ ಡೀಮ್ಡ್ ಡೇಟ್ ನಿಗದಿಪಡಿಸುವ ಕುರಿತು

ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದಚುನಾಯಿತರಾದವರು):-

820 (707) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪೊಲೀಸ್ ಇಲಾಖೆಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಸೇವೆಗೆ ಸೇರಿ ಶಾಖಾಧೀಕ್ಷರಾಗಿ ಮುಂಬಡ್ತಿ ನೀಡುವ ಸಮಯದಲ್ಲಿ ಪ್ರಥಮ ದರ್ಜೆ ಸಹಾಯಕ ಹುದ್ದೆಯಲ್ಲಿ ಎಷ್ಟು ಸಿಬ್ಬಂದಿಗಳಿಗೆ ಡೀಮ್ಡ್ ಡೇಟ್‌ಗಳನ್ನು ನಿಗದಿಪಡಿಸಲಾಗಿದೆ ; ಮತ್ತು ಎಷ್ಟು ವರ್ಷಗಳ ಕಾಲದ ಡೀಮ್ಡ್ ಡೇಟ್ ನಿಗದಿಪಡಿಸಲಾಗಿದೆ ; ಸದರಿ ಸಿಬ್ಬಂದಿಗಳು ವಾಸ್ತವಾಗಿ ಪ್ರಥಮ ದರ್ಜೆ ಸಹಾಯಕ ಮುಂಬಡ್ತಿ ಹೊಂದಿದ ದಿನಾಂಕ, ಡೀಮ್ಡ್ ಡೇಟ್ ನಿಗದಿಪಡಿಸಿದ ದಿನಾಂಕ ಮತ್ತು ದ್ವಿತೀಯ ದರ್ಜೆ ಸಹಾಯಕರಾಗಿ ಕರ್ತವ್ಯಕ್ಕೆ ಸೇರಿದ ದಿನಾಂಕದೊಂದಿಗೆ ಮಾಹಿತಿ ನೀಡುವುದು ;

(ಆ) ಪೊಲೀಸ್ ಇಲಾಖೆಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಸೇವೆಗೆ ಸೇರಿ ಶಾಖಾಧೀಕ್ಷರಾಗಿ ಮುಂಬಡ್ತಿ ನೀಡುವ ಸಮಯದಲ್ಲಿ ಎಷ್ಟು ಪ್ರಥಮ ದರ್ಜೆ ಸಹಾಯಕ ಹುದ್ದೆಯಲ್ಲಿ ಡೀಮ್ಡ್ ಡೇಟ್‌ಗಳನ್ನು 3 ರಿಂದ 13 ವರ್ಷಗಳವರೆಗೆ ನೀಡಲಾಗಿದೆ ; ಯಾವ ನಿಯಮದ ಅನ್ವಯ ನೀಡಲಾಗಿದೆ ;

(ಇ) ಪೊಲೀಸ್ ಇಲಾಖೆಯಲ್ಲಿ ಡೀಮ್ಡ್ ಡೇಟ್‌ಗಳನ್ನು ನಿಗದಿಪಡಿಸಲು ಇರುವ ನಿಯಮಗಳೇನು ; ಗರಿಷ್ಠ ಎಷ್ಟು ವರ್ಷಗಳ ವರೆಗೆ ಡೀಮ್ಡ್ ಡೇಟ್ ನಿಗದಿಪಡಿಸಬಹುದು ; ಡೀಮ್ಡ್ ಡೇಟ್ ನಿಗದಿಪಡಿಸಲು ಇರುವ ಮಾನದಂಡಗಳೇನು ; ಯಾವ ಆಧಾರದಲ್ಲಿ ಮುಂಬಡ್ತಿಯಲ್ಲಿ ಡೀಮ್ಡ್ ಡೇಟ್‌ಗಳನ್ನು ನಿಗದಿಪಡಿಸಲಾಗುತ್ತದೆ ; ಮಾಹಿತಿಯೊಂದಿಗೆ ಪ್ರತಿಯನ್ನು ಒದಗಿಸುವುದು ;

(ಈ) ಪೊಲೀಸ್ ಇಲಾಖೆಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಸೇವೆಗೆ ಸೇರಿ ಶಾಖಾಧೀಕ್ಷರಾಗಿ ಮುಂಬಡ್ತಿ ನೀಡುವ ಸಮಯದಲ್ಲಿ ಪ್ರಥಮ ದರ್ಜೆ ಸಹಾಯಕ ಹುದ್ದೆಯಲ್ಲಿ ಎಷ್ಟು ಸಿಬ್ಬಂದಿಗಳಿಗೆ 3 ವರ್ಷಗಳಿಗೂ

ಹೆಚ್ಚಿನ ಅವಧಿಯ ಡೀಮ್ಡ್ ಡೇಟ್‌ಗಳನ್ನು ನೀಡಲಾಗಿದೆ ; ಸದರಿ ಸಿಬ್ಬಂದಿಗಳು ಸರ್ಕಾರಿ ಸೇವೆಗೆ ಹಾಜರಾಗುವ ಸಮಯದಲ್ಲಿ ಯಾವ ಕಛೇರಿಯಲ್ಲಿ ವರದಿ ಮಾಡಿಕೊಂಡಿದ್ದರು ? (ವಿವರ ನೀಡುವುದು)